ಓ ಎಸ್ ನಂಃ 268-19
ಪಿ ಡಬ್ಲ್ಯೂ ಃ 1

ದಿಃ 17-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಂ ಆರ್ ಆರ್ ವಕೀಲರಿಂದ

20. ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ತುಮಕೂರಿನ ಸಿದ್ದಗಂಗಾ ಮಠದಲ್ಲಿ ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಮತ್ತು ದಾವೆಯಲ್ಲಿ ನನ್ನ ತಂದೆಯ ಹೆಸರನ್ನು ದುಮ್ಮಯ್ಯ ಅಲಿಯಾಸ್ ನರಸಿಂಹಯ್ಯ ಎಂದು ಬರೆಯಲಾಗಿದೆ ಎಂದರೆ ನಿಜ, ಸಾಕ್ಷಿ ಮುಂದುವರೆದು ಓ ಎಸ್ ನಂ 184/1997 ರಲ್ಲಿ ನನ್ನ ತಂದೆಯ ಹೆಸರನ್ನು ನರಸಿಂಹಯ್ಯ ಎಂದು ಕೊಡಲಾಗಿದೆ ಎಂದು ಹೇಳುತ್ತಾರೆ. ನನ್ನ ಶಾಲಾ ದಾಖಲೆಗಳಲ್ಲಿ ನನ್ನ ತಂದೆಯ ಹೆಸರನ್ನು ನರಸಿಂಹಯ್ಯ ಮಾತ್ರ ಎಂದು ಕೊಡಲಾಗಿದೆ. ನನ್ನ ಚುನಾವಣಾ ಗುರುತಿನ ಚೀಟಿ, ಆಧಾರ್ ಕಾರ್ಡ್ ಗಳಲ್ಲಿ ನನ್ನ ತಂದೆಯ ಹೆಸರು ನರಸಿಂಹಯ್ಯ ಎಂದು ಇರುತ್ತದೆ ಎಂದರೆ ನಿಜ. ಈಗಿರುವ ಆಧಾರ್ ಕಾರ್ಡ್ ಮತ್ತು ನನ್ನ ಪ್ಯಾನ್ ಕಾರ್ಡಿನಲ್ಲಿ ನನ್ನ ತಂದೆಯ ಹೆಸರು ನರಸಿಂಹಯ್ಯ ಎಂದು ಇರುತ್ತದೆ. ಯಾವುದೇ ದಾಖಲೆಗಳಲ್ಲಿ ನಾನು ಗೋವಿಂದಪ್ಪ ಹಾಗೂ ಗಂಗಮ್ಮರವರ ಸಾಕು ಮಗ ಎಂದು ಇರುವುದಿಲ್ಲ ಎಂದರೆ ನಿಜ, ಸಾಕ್ಷಿ ಮುಂದುವರೆದು ಆದರೆ ನನ್ನನ್ನು ಸಾಕಿಕೊಂಡಿದ್ದರು ಎಂದು ಹೇಳುತ್ತಾರೆ. ನಾನು ಗೋವಿಂದಪ್ಪ ಹಾಗೂ ಗಂಗಮ್ಮರವರ ಸಾಕು ಮಗ ಎಂದು ತೋರಿಸಲು ಮೃತ್ಯುಪತ್ರ ಹಾಗೂ ಚುನಾವಣಾ ಪಟ್ಟಿ ಇದ್ದು ಚುನಾವಣಾ ಪಟ್ಟಿಯನ್ನು ನಾನು ಓ ಎಸ್ ನಂ 184/1997 ರಲ್ಲಿ ಹಾಜರುಪಡಿಸಿರುತ್ತೇನೆ. ಓ ಎಸ್ ನಂ 184/1997 ರಲ್ಲಿ ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ ಆದರೆ ಊರಿನ ಜನ ನಾನು ಎಕ್ಸ್ ಪಾರ್ಟಿ ಆಗಿರುತ್ತೇನೆ ಎಂದು ಹೇಳಿದ್ದು ನಂತರ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ಹೇಳುತ್ತಾರೆ. ನಾನು ದುಮ್ಮಯ್ಯನ ಮಗ ರಾಮಕೃಷ್ಣಯ್ಯ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ. ಸಾಕ್ಷಿಗೆ ಈಗ ನಿಪಿ 38 ನ್ನು ತೋರಿಸಲಾಗಿ ಅದರಲ್ಲಿರುವ ದುಮ್ಮಯ್ಯನ ಮಗ ರಾಮಕೃಷ್ಣಯ್ಯ ಯಾರು ಎಂದರೆ ಅಂತಹವರು ಯಾರು ಇರುವುದಿಲ್ಲ ಎಂದು ಹೇಳುತ್ತಾರೆ, ಸಾಕ್ಷಿ ಮುಂದುವರೆದು ಊರಿನಲ್ಲಿ ನನ್ನ ತಂದೆಯನ್ನು ಅಡ್ಡ ಹೆಸರಿನಲ್ಲಿ ದುಮ್ಮಯ್ಯ ಎಂದು ಕರೆಯುತ್ತಾರೆ ಎಂದು ಹೇಳುತ್ತಾರೆ. ನನ್ನ ತಂದೆಯನ್ನು ಊರಿನಲ್ಲಿ ದುಮ್ಮಯ್ಯ ಎಂದು ಕರೆಯುತ್ತಾರೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. ಈ ದಾವೆಯಲ್ಲಿರುವ 2 ನೇ ಪ್ರತಿವಾದಿ ನನ್ನ ಹೆಂಡತಿ ಮತ್ತು 3 ನೇ ಪ್ರತಿವಾದಿ ನನ್ನ ಹಾಗೂ 2 ನೇ ಪ್ರತಿವಾದಿಯ ಮಗಳು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು 4 ನೇ ಪ್ರತಿವಾದಿ ನನ್ನ ಹೆಂಡತಿಯಾಗಿರುತ್ತಾರೆ ಎಂದು ಹೇಳುತ್ತಾರೆ. ನಾನು 2

ಮತು 3ನೇ ಪ್ರತಿವಾದಿಗಳನ್ನು ನೋಡಿರುವುದಿಲ್ಲ. 2ನೇ ಪ್ರತಿವಾದಿ ನನ್ನ ಹೆಂಡತಿ ಎಂದುಒಪ್ಪಿಗೆ ಪತ್ರ ಮಾಡಿದ್ದರಿಂದ ನಾನು 2 ಮತ್ತು 3ನೇ ಪ್ರತಿವಾದಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. 2ನೇ ಪ್ರತಿವಾದಿಗೆ ಹುಟ್ಟಿನಿಂದ ಕುರುಡು ಆಗಿರುತ್ತಾರೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ ನನ್ನ ಜೊತೆ ವಾಸವಿರುವುದಿಲ್ಲ. 1ನೇ ಪ್ರತಿವಾದಿ ಹಾಗೂ ಅವರ ಮಕ್ಕಳು ನನ್ನ ಜಮೀನನ್ನು ಬಿ ನರಸಿಂಹರಾಜುರವರಿಗೆ ಮಾರಾಟ ಮಾಡಿದ್ದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. 2ನೇ ಪ್ರತಿವಾದಿಯ ಚುನಾವಣಾ ಗುರುತಿನ ಚೀಟಿಯಲ್ಲಿ ಹಾಗೂ ಅವರ ಆಧಾರ್ ಕಾರ್ಡಿನಲ್ಲಿ ನನ್ನ ಹೆಸರು ಇರುತ್ತದೆ ಎಂದರೆ ಸೃಷ್ಟಿ ಮಾಡಿಕೊಂಡಿರಬಹುದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ 3ನೇ ಪ್ರತಿವಾದಿಯ ಶಾಲಾ ದಾಖಲೆಗಳಲ್ಲಿ ತಂದೆಯ ಹೆಸರಿನಲ್ಲಿ ನನ್ನ ಹೆಸರು ಇರುತ್ತದೆ ಎಂದರೆ ಗೊತ್ತಿಲ್ಲ. ಓ ಎಸ್ ನಂ 184/1997 ರ ಪ್ರಾರಂಭದಲ್ಲಿ ನಾನು 2 ಮತ್ತು 3ನೇ ಪ್ರತಿವಾದಿಗಳ ಜೊತೆ ನ್ಯಾಯಾಲಯಕ್ಕೆ ಬರುತ್ತಿದ್ದೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
**ಮಾಗಡಿ.**